REVIEW OF RESEARCH
ISSN: 2249-894X
IMPACT FACTOR : 5.7631(UIF)
VOLUME - 11 | ISSUE - 9 | JUNE - 2022

# ನೆಮ್ಮದಿ ಜೀವನಕ್ಕಾಗಿ ಶರಣರ ವಿಚಾರಗಳು

ಶಿವರಾಜ ಶಾಮರಾವ
ಅತಿಥಿ ಉಪನ್ಯಾಸಕ
ಗುಲಬರ್ಗಾ ವಿಶ್ವವಿದ್ಯಾಲಯ ಸ್ನಾತಕೋತ್ತರ ಕೇಂದ್ರ
ಹಾಲಹಳ್ಳಿ, ಬೀದರ ಜಿಲ್ಲೆ



ಪ್ರತಿಯೊಬ್ಬರ ಹೃದಯವು ಜೀವನದಲ್ಲಿ ಸುಖ, ಸಂತೋಷ, ಉಲ್ಲಾಸ, ಉತ್ಸಾಹ, ನೆಮ್ಮದಿ, ಮತ್ತು ಶಾಂತಿಗಾಗಿ ಹಾತೊರೆಯುತ್ತದೆ. ಅವುಗಳನ್ನು ಹಣದಿಂದ ಪಡೆಯಲು ಸಾಧ್ಯವಿಲ್ಲ. ಒಂದು ವೇಳೆ ಹಾಗಿದ್ದರೆ ಜಗತ್ತಿನಲ್ಲಿ ಎಷ್ಟೊಂದು ಶ್ರೀಮಂತರಿದ್ದಾರೆ. ಅವರೆಲ್ಲ ಆರಾಮವಾಗಿ ಬದುಕಬಹುದಿತ್ತು, ಅವರಾರಿಗೂ ನೆಮ್ಮದಿಯ ಬದುಕಿಲ್ಲ. ಒಂದಿಲ್ಲೊಂದು ಚಿಂತೆಯಿಂದ, ಒಂದಿಲ್ಲೊಂದು ಸಮಸ್ಯೆಯಿಂದ ತೊಂದರೆಯಲ್ಲಿದ್ದಾರೆ. ಅಂಥ ಜನರಿಗೆ ಜೀವನದಲ್ಲಿ ನೆಮ್ಮದಿಯಿಲ್ಲ; ಯಾವುದೇ ಸಂತೋಷಗಳಿಲ್ಲ. ಇಂದು ಕಳ್ಳತನ, ದರೋಡೆ, ಕೊಲೆ, ಸುಲಿಗೆ, ಲಂಚ ಮೋಸ ಅನ್ಯಾಯದ ಮೂಲಕ ಹಣ ಸಂಪಾದಿಸುವವರೇ ಹೆಚ್ಚಾಗಿದ್ದಾರೆ. ಹೀಗೆ ಅನ್ಯಾಯದಿಂದ ಹಣ ಗಳಿಸುವವರು ನೆಮ್ಮದಿಯಿಂದ ಇರಲಾರರು. ಅಲ್ಪ ಪ್ರಮಾಣದ ಆದಾಯವಿದ್ದರೂ ಅದನ್ನು ಸತ್ಯ ಶುದ್ಧ ಕಾಯಕದಿಂದ ಗಳಿಸಿದರೆ ಮಾನವನಿಗೆ ಅದರಲ್ಲಿ ಶಾಂತಿ ನೆಮ್ಮದಿ ಇರುತ್ತದೆ. ನಾವು ಒಳ್ಳೆಯ ಮಾನವರಾಗಬೇಕಾದರೆ ನಮ್ಮ ಹಿರಿಯರೂ ಆಧ್ಯಾತ್ಮ ಜೀವಿಗಳು, ತತ್ವಜ್ಞಾನಿಗಳು ತಮ್ಮ ಜೀವನಾನುಭವಗಳನ್ನು ತಮ್ಮ ಸಾಹಿತ್ಯದ ಮೂಲಕ ಸಾರಿ ಹೇಳಿದ್ದಾರೆ. ಮಾನವನು ನಿಜವಾದ ಮಾನವನಾಗಿ ಈ ಲೋಕದಲ್ಲಿ ಬಾಳಲು ಹಾಗೂ ಪಾರಮಾರ್ಥಿಕ ಸುಖ ಸಾಧಿಸಲು ಶರಣರು ನೀಡಿದ ವಚನ ಸಾಹಿತ್ಯ ಬಹಳ ಅವಶ್ಯಕ.

ಶರಣರ ಜೀವನ ಮತ್ತು ಅವರು ಬರೆದ ಸಾಹಿತ್ಯ ತತ್ವಗಳು ಪ್ರಪಂಚಕ್ಕೆ ಅನಿವಾರ್ಯ ಮತ್ತು ಪ್ರಸ್ತುತವಾಗಿವೆ. ಕೊಲೆ, ಸುಲಿಗೆ, ದರೋಡೆ, ಅನ್ಯಾಯ, ಅತ್ಯಾಚಾರ, ಅಕೃತ್ಯ, ಅನಾಚಾರ, ಭ್ರಷ್ಟಾಚಾರಗಳು ಎಡಬಿಡದೇ ರಾಕ್ಷಸನಂತೆ ತಾಂಡವಾಡುತ್ತಿರುವಾಗ ಮಾನವನಿಗೆ ಮಾರ್ಗದರ್ಶನವನ್ನೀಯಲು ಶರಣರ ವಿಚಾರಗಳು ಇಂದಿಗೂ ಪ್ರಸ್ತುತವಾಗಿದೆ. ಕುಕೃತ್ಯಗಳು ಯಾವುದೇ ಕಾಲದಲ್ಲಿ ನಡೆದಾಗ, ಆಯಾ ಕಾಲಕ್ಕೆ ಅಲ್ಲಿ ಶರಣರಾಗಲೀ, ಸಂತರಾಗಲಿ, ಮಹಾಪುರುಷರಾಗಲೀ ಜನ್ಮ ತಾಳಿ ಅಂಥ ಹೀನ ಕುಕೃತ್ಯಗಳನ್ನು ಮಾಡುವವರನ್ನು ಸನ್ಮಾರ್ಗಕ್ಕೆ ಎಳೆದೊಯ್ದಿರುವುದನ್ನು ಇತಿಹಾಸ, ಪುರಾಣಗಳು ತಿಳಿಸುತ್ತವೆ. ಈ ಆಧುನಿಕ ಕಾಲದಲ್ಲಿ ಮಾನವೀಯತೆ ಮರೆಯಾಗುತ್ತಿರುವ ಸಂದರ್ಭದಲ್ಲಿ ಶರಣರ ವಿಚಾರಧಾರೆ ತೀರಾ ಅವಶ್ಯಕವಾಗಿದೆ. ಶರಣರು ನಡೆದುಬಂದ ದಾರಿ ಹಾಗೂ ಆದರ್ಶಗಳನ್ನು ಇಡೀ ಮಾನವ ಕೋಟಿಯು ತಮ್ಮ ನಿತ್ಯ ಜೀವನದಲ್ಲಿ ಆಳವಡಿಸಿಕೊಳ್ಳುವ ಪ್ರಚಾರಕಾರ್ಯ ಇಂದು ಆಗಬೇಕಾಗಿದೆ.

ಶರಣರು ನಡೆ– ನುಡಿಗಳಲ್ಲೊಂದಾಗಿ ಸಮಾಜ ಸೇವೆ ಮಾಡಿದವರು, ಕಾಯಕದಿಂದಲೇ ಕೈಲಾಸ ಕಂಡ ಅವರು ಶ್ರೀಸಾಮಾನ್ಯನಿಗೆ ಉತ್ತಮ ಮಾರ್ಗದರ್ಶನ ನೀಡಿದವರಾಗಿದ್ದಾರೆ. ಶರಣರು ಸಂಗ್ರಹಿಸಿಡುವ ಮನೋಭಾವದವರಾಗಿರಲಿಲ್ಲ. ಅವರು 'ಕೊಟ್ಟದ್ದು ತನಗೆ ಬಚ್ಚಿಟ್ಟದ್ದು ಪರರಿಗೆ' ಎಂಬ ನೀತಿಯನ್ನು ಅನುಸರಿಸಿದವರು. ಅದನ್ನು ಪರಿಪಾಲಿಸಲು ಸಮಾಜಕ್ಕೂ ಕರೆಕೊಟ್ಟರು. ಕರ್ನಾಟಕದಲ್ಲಿ ಚಂಪೂ ಕಾವ್ಯ ಹನ್ನೆರಡನೆಯ ಶತಮಾನದ ಹೊತ್ತಿಗೆ ತನ್ನ ಸತ್ವ ಕಳೆದುಕೊಂಡಿತು. ಶೌರ್ಯ, ಸಾಹಸ, ಉತ್ಸಾಹ. ಮಹತ್ವಾಕಾಂಕ್ಷೆ ಕೊನೆಯಾಗಿ ಅಲಸ್ಯ, ಕಪಟ, ವಂಚನೆ, ಮೋಸ ಇವು ತಲೆದೋರಿದಾಗ ಸಾಮಾಜಿಕ ಹೊಸ ವಿಚಾರಗಳನ್ನೊಳಗೊಂಡ ಮೌಲ್ಯಗಳು ಜನ ಸಾಮಾನ್ಯರ ಜೀವನವನ್ನು ರೂಪಿಸಲು ವಚನ ಸಾಹಿತ್ಯ ಪ್ರಕಾರವು ಹುಟ್ಟಿಕೊಂಡಿತು. ಅದು ಆಗಿನ ರಾಜಾಶ್ರಯದ ಸಾಹಿತ್ವವನ್ನು ವಿರೋಧಿಸಿ ಸ್ವತಂತ್ರ ಸಾಮಾನ್ಯರು ಸಮಕಾಲೀನ ನಡುಗನ್ನಡ ಆಡುನುಡಿಗೆ ತೀರ ಸಮೀಪದ ಶೈಲಿಯನ್ನೇ ರೂಪಿಸಿಕೊಂಡರು. ಶರಣರು ರೂಪಿಸಿದ ವಚನಗಳು ಅನುಭವಗಳಿಂದ ಮತ್ತು ಆಲೋಚನೆಗಳಿಂದ ಕೂಡಿದವುಗಳಾಗಿವೆ. ಹಾಗಾಗಿ ವಚನ ಸಾಹಿತ್ಯವು ಕನ್ನಡ ಸಾಹಿತ್ಯದಲ್ಲಿ ಒಂದು ವಿಶಿಷ್ಟವಾದ ಸ್ಥಾನಮಾನವನ್ನು ಪಡೆದುಕೊಂಡಿತು.

ಅದು ಯಾವ ಒಂದು ಭಾಷೆಯ ಮಾದರಿಯನ್ನು ಅನುಸರಿಸದೇ, ಸ್ವತಃ ತಮ್ಮ ಒಂದು ಅನುಭವದ ಮೇಲೆ ರೂಪಿಸಿದ ಒಂದು ಪ್ರಕಾರ ಶರಣರದಾಯಿತು. ಇದು ಬಾವಗೀತಾತ್ಮಕತೆಯಿಂದ ಕೂಡಿದ್ದು ವಿಶ್ವಸಾಹಿತ್ಯಕ್ಕೂ ಹೆಮ್ಮೆ ತರುವಂಥದ್ದಾಗಿದೆ.

ಇಂದಿನ ಆಧುನಿಕರಣ, ಜಾಗತೀಕರಣ, ಖಾಸಗೀಕರಣ, ಉದಾರೀಕರಣ, ಕಂಪ್ಯೂಟರೀಕರಣಗಳ ಆಧುನಿಕ ಜಗತ್ತಿನ ಭರಾಟೆಯ ಬದುಕಿನಲ್ಲಿ ಮಾನವ ತಾನು ಗಳಿಸಿಕೊಂಡದ್ದು ವಿರಳ. ಕಳೆದುಕೊಂಡಿದ್ದೇ ಹೆಚ್ಚಾಗಿದೆ. ಇಂದಿನ ಮಾನವ ತನ್ನ ಬುದ್ಧಿಶಕ್ತಿ ಸಾಮರ್ಥ್ಯದಿಂದ ತನಗೆ ಬೇಕಾದ ಅವಶ್ಯಕತೆಗನುಸಾರವಾಗಿ ಏನೆಲ್ಲಾ ಯಂತ್ರೋಪಕರಣಗಳನ್ನು ಆವಿಷ್ಕರಿಸಿದ್ದಾನೆ. ಈ ಯಂತ್ರಗಳ ಜೊತೆಯಾಗಿಯೇ ಕಾಲಹರಣ ಮಾಡುವ ಮಾನವನಲ್ಲಿ ಸೇವಾ ಮನೋವೃತ್ತಿ. ಸತತ ಹಾಗೂ ಕಠಿಣ ಪರಿಶ್ರಮ ದಿಟ್ಟ ಪ್ರಯತ್ನ ಸಮಯ ಪ್ರಜ್ಞೆ, ಕರ್ತವ್ಯ ಪ್ರಜ್ಞೆ, ಸಾಮಾಜಿಕ ಕಳಕಳಿ ಅರಿವು ಇವೆಲ್ಲ ದಿನದಿಂದ ದಿನಕ್ಕೆ ಅವನಿಂದ ದೂರವಾಗುತ್ತಿವೆ. ಇಂದಿನ ಯುವಕರಲ್ಲಂತೂ ನಿರಾಸೆ, ಹತಾಷೆ, ಅನಾದಾರ, ಉಪೇಕ್ಷಾಭಾವಗಳು ಇವೆಲ್ಲ ತುಂಬಿಕೊಂಡಿವೆ. ಅಷ್ಟೇ ಅಲ್ಲ ಅವರು ಅನೇಕ ದುಷ್ಟ ಚಟಗಳಿಗೆ ಬಲಿಯಾಗಿ ತಂದೆ– ತಾಯಂದಿರ ಕನಸುಗಳನ್ನು ಸಹ ಅವರು ನುಚ್ಚು ನೂರು ಮಾಡುತ್ತಿದ್ದಾರೆ.

ಈ ತರಹದ ಇಂದಿನ ಪರಿಸ್ಥಿತಿಯನ್ನು ನಿವಾರಿಸಿ, ಸುವ್ಯವಸ್ಥಿತವಾದ ಸದೃಢವಾದ ಸಮಾಜವನ್ನು ನಿರ್ಮಿಸಬೇಕಾಗಿದೆ. ಆದ್ದರಿಂದಲೇ ನಾವಿಂದು ವಚನ ಸಾಹಿತ್ಯ, ಶರಣ ಸಂಸ್ಕೃತಿಗಳ ಆರಾಧನ ಮನೋಭಾವವನ್ನು ಬೆಳೆಸಿಕೊಳ್ಳುವುದು ಅತ್ಯಂತ ಅವಶ್ಯವಾಗಿದೆ. ಶರಣರು ಪ್ರತಿಪಾದಿಸಿದ ಮಾನವೀಯ ಮೌಲ್ಯಗಳನ್ನು ಪ್ರತಿಯೊಬ್ಬರೂ ತಮ್ಮ ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ನಡೆಯುವುದು ತೀರಾ ಅವಶ್ಯವಾಗಿದೆ.

ಮಾನವೀಯತೆಯು ಸಹಾನುಭೂತಿ, ಪ್ರೀತಿ, ಅನುಕಂಪ, ಉತ್ಕಟವಾದ ಕಳಕಳಿ ಇವುಗಳಿಂದ ಕೂಡಿದೆ. ಅದು ಸರ್ವಕಾಲಕ್ಕೂ ಆದರಣೀಯವಾದುದಾಗಿದೆ. ಮನುಷ್ಯನು ತನ್ನ ಜೀವತಾವಧಿಯಲ್ಲಿ ಈ ಭೌತಿಕ ಜಗತ್ತಿನಲ್ಲಿ ತನ್ನ ಹಾಗೂ ತನ್ನ ಜತೆಗಿದ್ದ ಬಂಧು– ಬಾಂಧವರ ಸುಖವನ್ನು ಸಾಧಿಸುವುದೇ ಮಾನವೀಯತೆಯ ಮುಖ್ಯ ಗುರಿಯಾಗಿದೆ. ಆ ಗುರಿಯನ್ನು ಸಾಧಿಸಬೇಕಾದರೆ ಶರಣರು ಪ್ರತಿಪಾದಿಸಿದ ಕೆಲವು ಮೌಲಿಕವಾದ ಮೌಲ್ಯಗಳನ್ನು ನಾವೆಲ್ಲರೂ ಇಂದು ಅಳವಡಿಸಿಕೊಳ್ಳುವುದು ಅವಶ್ಯವಾಗಿದೆ. ಬಸವಾದಿ ಶರಣರು ಸರಿದ ಮೌಲ್ಯಗಳು ಈ ಕೆಳಗಿನಂತೆ ನೋಡಬಹುದು.

**ದಯೆ:**

ಶರಣರು ವೇದಗಳಲ್ಲಿ ಬಂದಿರುವ ಯಜ್ಞಯಾಗಾದಿಗಳ ಅಚರಣೆಯನ್ನು ಕಟುವಾಗಿ ಟೀಕಿಸುತ್ತಾರೆ. ಯಜ್ಞಯಾಗಾದಿಗಳಲ್ಲಿ ಪ್ರಾಣಿಯನ್ನು ಬಲಿಕೊಡುವುದೇ ಹಿಂಸೆಯಿಂದ ಕೂಡಿದುದಾಗಿದೆ. ಇಂಥ ಪ್ರವೃತ್ತಿಯನ್ನು ಶರಣರು ಖಂಡಿಸಿದರು.

**"ದಯವಿಲ್ಲದ ಧರ್ಮವದೇವುದಯ್ಯ?**
**ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿಯೂ**
**ದಯವೇ ಧರ್ಮದ ಮೂಲವಯ್ಯ**
**ಕೂಡಲಸಂಗಯ್ಯನಂತಲ್ಲದೊಲ್ಲನಯ್ಯ"**

ಎಂದು ಬಸವಣ್ಣವರು ಹೇಳಿದ್ದಾರೆ. ಅವರ ನೇತೃತ್ವದಲ್ಲಿ ಶರಣರೂ ಅದನ್ನು ವಿರೋಧಿಸಿದರು. ಅಶ್ವಮೇಧ ಮೊದಲಾದ ಯಾಗಗಳು, ಹೋಮ ನೇಮಗಳು ಇವೆಲ್ಲವುಗಳಿಗಿಂತ ಶರಣರ ನುಡಿಗಳು ಅಧಿಕ ಮಹತ್ವ ಪಡೆದವು. 'ಹಾಲ ತೊರೆಗೆ ಬೆಲ್ಲದಂತಹ ಕೆಸರು, ಸಕ್ಕರೆಯಂತಹ ಮರಳು ತೆರೆನೊರೆಗಳು, ಇಂತಪ್ಪ ಆದ್ಯರ ವಚನವಿರಲು' ಇವುಗಳನ್ನು ಬಿಟ್ಟು ಮತ್ತೊಂದನ್ನು ಬಯಸುವುದು ಬಾವಿಯ ತೋಡಿ ಉಪ್ಪು ನೀರನ್ನು ಸವಿದಂತೆ ಆಗುತ್ತದೆ ಎಂದು ಶರಣರು ತಿಳಿಸುತ್ತಾರೆ. ಅಂದರೆ ಭಗವಂತನ ಭಾವನೆ ನಿರ್ಮಾಣವಾಗುವದಕ್ಕಾಗಿ ಹಾಗೂ ಅದು ಮನಸ್ಸಿನಲ್ಲಿ ಸ್ಥಿರವಾಗುವುದಕ್ಕಾಗಿ ಅಂತಃಕರಣವು ನಿರ್ಮಲವಾಗಬೇಕಾಗುತ್ತದೆ. ದ್ವೇಷ– ಮತ್ಸರಗಳು ಆನಂದವನ್ನು ನಾಶಮಾಡುತ್ತವೆ. ಅವೆಲ್ಲವುಗಳನ್ನು ಇಲ್ಲದಂತೆ ಮಾಡುವುದಕ್ಕಾಗಿ ವಿವೇಕದಂಥ ಬೇರೆ ಮಾರ್ಗವಿಲ್ಲ. ವಿವೇಕದಿಂದ ನಿರ್ಮತ್ಸರವಾದ ಅಂತಃಕರಣದಲ್ಲಿ ಭಗವಂತನ ಆಸ್ತಿತ್ವ ನಿಷ್ಠೆಯ ಬಳ್ಳಿಯು ಚಿಗುರುತ್ತ ಬೆಳೆಯುತ್ತ ಆಕಾಶದವರೆಗೆ ತಲುಪುತ್ತದೆ. ಹೀಗೆ ಶರಣರು ತಿಳಿಸಿದ 'ದಯೆ'ಯು ಇಂದಿಗೂ ಪ್ರಸ್ತುತವಾಗಿದೆ ಎನ್ನಬಹುದು.

**ಕಾಯಕನಿಷ್ಠೆ :**

"ಕಾಯಕದಲ್ಲಿ ನಿರತನಾದಡೆ ಗುರು ದರುಶನವಾದರೂ ಮರೆಯಬೇಕು. ಲಿಂಗ ಪೂಜೆಯಾದಡೂ ಮರೆಯಬೇಕು. ಕಾಯಕವೇ ಕೈಲಾಸವಾದ ಕಾರಣ ಅಮರೇಶ್ವರಲಿಂಗವಾಯಿತ್ತಾದಡೂ ಕಾಯಕದೊಳಗು" ಎಂದು ಆಯ್ದಕ್ಕಿ ಮಾರಯ್ಯ ಶರಣರು ಕಾಯಕದ ಮಹತ್ವವನ್ನು ಸಾರಿದ್ದಾರೆ.

ಬಸವಣ್ಣನವರು ಬಿಜ್ಜಳನ ಬಳಿ ಭಂಡಾರದ ಇಲಾಖೆಯ ದಂಡನಾಯಕರಾಗಿ ದುಡಿದರು. ತಮ್ಮ ಸಂಪತ್ತಿನ ಗಳಿಕೆಗಾಗಿ ಅಲ್ಲ "ಹೊತ್ತಾರೆ ಎದ್ದು ಕಣ್ಣ ಹೊಸೆಯುತ್ತ, ಎನ್ನೊಡಲಿಂಗೆ, ಎನ್ನೊಡವೆಗೆ, ಎನ್ನಮಡದಿ ಮಕ್ಕಳಿಗೆಂದು ಕುಡಿದೆನಾದೊಡೆ ಎನ್ನ ಮನಕ್ಕೆ ಮನವೇ ಸಾಕ್ಷಿ" ಎಂದು ಹೇಳುತ್ತಾ ಬಸವಣ್ಣನು ತಾನು ಬಿಜ್ಜಳನ ಬಳಿ ಸೇವಾವೃತ್ತಿಯನ್ನು ಕೈಗೊಂಡಿರುವ ಕಾರಣವನ್ನು ಈ ಮುಂದಿನಂತೆ ತಿಳಿಸಿದ್ದಾರೆ. "ಭವಿ ಬಿಜ್ಜಳನ ಗದ್ದುಗೆಯ ಕೆಳಗೆ ಕುಳ್ಳಿರ್ದು ಓಲೈಸಿಹನೆಂದು ನುಡಿದವರಯ್ಯ ಪ್ರಮಥರು:

ಕೊಡುವೆನುತ್ತರವನವರಿಗೆ ಕೊಡಲಮ್ಮುವೆ ಹೊಲೆ ಹೊಲೆಯರ ಮನೆಯ ಹೊಕ್ಕು....ಸಭೆ ಕೈಕೂಲಿಯ ಮಾಡಿಯಾದರೆಯೂ ನಿಮ್ಮ ನಿಲವಿಂಗೆ ಕುದಿವೆನಲ್ಲದೆ. ಎನ್ನೊಡಲವಸರಕ್ಕೆ ಕುದಿದೆನಾದೊಡೆ ತಲೆದಂಡ ಕೂಡಲಸಂಗಮದೇವಾ" ಎಂಬುದು ಬಸವಣ್ಣನವರ ವಿಚಾರ. ಹೀಗೆ ಶರಣರು ಸಂತರು ಸಾರಿದ ಕಾಯಕ ತತ್ವ ಇಂದಿಗೂ ಅತ್ಯವಶ್ಯಕವಾಗಿದೆ.

**ದಾಸೋಹ ಮನೋಭಾವ :**

ದಾಸೋಹವೆಂದರೆ ನಮ್ಮ ದುಡಿತದ ಫಲವಾಗಿ ಬಂದ ಹೆಚ್ಚಿನ ಲಾಭವನ್ನು ವಿನಮ್ರಭಾವದಿಂದ ಸಮಾಜಕ್ಕೆ ಸಮರ್ಪಿಸುವದಾಗಿದೆ. ಸಮಾಜದ ಸುಧಾರಣೆಗೆ ಸಾರ್ವಜನಿಕ ಇತರ ಕೆಲಸಗಳಿಗೆ ಉದಾರವಾಗಿ ತನು ಮನ, ಧನಗಳಿಂದ ಸಮರ್ಪಿಸುವ ಧಾರೆಯರೆಯುವ ಪ್ರತಿಯೊಂದು ಕೆಲಸವನ್ನು ದಾಸೋಹವೆಂದು ಕರೆಯುತ್ತೇವೆ. "ತನುವಿಡಿದು ದಾಸೋಹ ಮಾಡಿ ಮನವಿಡಿದು ದಾಸೋಹ ಮಾಡಿ ಧನವಿಡಿದು ದಾಸೋಹ ಮಾಡಿ"ಎಂದು ಅಕ್ಕಮಹಾದೇವಿಯ, ನಾವು ಮಾಡಿದ ದಾಸೋಹವು ತನು, ಮನ, ಧನದಿಂದ ಕೂಡಿದುದಾಗಿರ ಬೇಕೆನ್ನುತ್ತಾಳೆ. ಆ ರೀತಿಯಾಗಿ ಮಾಡಿದ ದಾಸೋಹವೇ ಫಲಕಾರಿಯಾದುದು. ತನ್ನ ಮಡದಿ ಮಕ್ಕಳಿಗಾಗಿ ಬಳಸಿಕೊಳ್ಳಲಾರದೆ: ಮುಂದಿನ ಜೀವನಕ್ಕಾಗಿಯೆಂದು ಸಂಗ್ರಹಿಸಿಕೊಳ್ಳಲಾರದೆ: ಅಂದು ಎಷ್ಟು ಬೇಕೋ ಅಷ್ಟನ್ನೇ ಮಾತ್ರ ವಿನಿಯೋಗಿಸಿಕೊಂಡು ಉಳಿದುದರಲ್ಲಿ ಸಮಾಜದ ಸದ್ವಿನಿಯೋಗಕ್ಕಾಗಿ ಉಪಯೋಗಿಸಬೇಕೆಂಬುದು ಅವರ ವಿಚಾರವಾಗಿತ್ತು.

ಆದರೆ ಇಂದಿನ ದಿನಮಾನಗಳಲ್ಲಿ ಜನರು ವಾಮ ಮಾರ್ಗದಿಂದ ಹಣಗಳಿಸಿ, ಸ್ವಿಸ್ ಬ್ಯಾಂಕ್‌ಗಳಂಥ ದೊಡ್ಡ ದೊಡ್ಡ ಬ್ಯಾಂಕುಗಳಲ್ಲಿ ತಮ್ಮವಷ್ಟೇ ಅಲ್ಲದೆ ತಮ್ಮ ಕುಟುಂಬದ ಇತರೆ ಸದಸ್ಯರುಗಳ ಹೆಸರುಗಳ ಖಾತೆಗಳ ಮೇಲೆ ಹಣವನ್ನು ಸಂಗ್ರಹಿಸಿಡುತ್ತಾರೆ. ದೇಶಕ್ಕೆ ಆಘಾತಕಾರಿಯಾಗುವಂಥ ಕೃತ್ರವಾದರೂ ಸರಿ; ಆದರಿಂದ ಹಣ ಬರುತ್ತದೆಂದರೆ ಅಂಥ ನೀಚ ಕೆಲಸವನ್ನು ಮಾಡಲು ಹೇಸುವದಿಲ್ಲ. ಹಣ ಗಳಿಸುವ ಸಲುವಾಗಿ ಆ ಕೆಲಸವನ್ನು ಮಾಡಿಯೇ ಮಾಡುತ್ತಾರೆ. ಇಂಥವರಿಗೆ ಮಾರ್ಗದರ್ಶನ ಮಾಡಲು ಶರಣರ ವಿಚಾರಗಳು ಇಂದು ಪ್ರಸ್ತುತವಾಗಿವೆ.

**ಆರ್ಥಿಕ ಅಸಮಾನತೆ :**

ತಗ್ಗು ಇದ್ದಲ್ಲಿ ನೀರು ಸಂಗ್ರಹವಾಗುವಂತೆ ಯಾರು ಆರ್ಥಿಕತೆಯಿಂದ ಸಬಲರಾಗಿ ಮುಂದುವರೆದಿದ್ದಾರೋ ಮತ್ತೇ ಅವರೇ ಮುಂದುವರೆಯುತ್ತಿದ್ದಾರೆ. ಮತ್ತು ಯಾರು ಆರ್ಥಿಕತೆಯಿಂದ ದುರ್ಬಲರಾಗಿರುವರೋ ಅವರು ಹಾಗೇ ದುರ್ಬಲರಾಗಿ ತಿನ್ನಲಿಕ್ಕೆ ಅನ್ನವಿಲ್ಲದೆ, ಇರಲಿಕ್ಕೆ ಮನೆಯಿಲ್ಲದೆ, ತೊಡಲಿಕ್ಕೆ ಬಟ್ಟೆಯಿಲ್ಲದೆ ನಿರ್ಗತಿಕರಾಗಿದ್ದಾರೆ. ಇಂಥ ಅಸಮಾನತೆಯನ್ನು ಹೋಗಲಾಡಿಸಬೇಕಾದರೆ ಶರಣರು ಹಾಕಿಕೊಟ್ಟ ದಾರಿಯನ್ನು ಕ್ರಮಿಸುವುದು ಇಂದು ಬಹಳ ಮುಖ್ಯವಾಗಿದೆ. ನುಲಿಯ ಚಂದಯ್ಯನ ವಚನವೊಂದು ಆರ್ಥಿಕ ಅಸಮಾನತೆಯನ್ನೇ ಹಾಗೂ ಕಾಯಕದ ಮಹತ್ತತೆಯನ್ನು ಎತ್ತಿ ತೋರಿಸುತ್ತದೆ.

**"ಸತ್ತ ಶುದ್ಧ ಕಾಯಕದಲ್ಲಿ ಚಿತ್ರ ವಿಚ್ಚಂದವಾಗಿರಬೇಕು.**
**ನೇಮದ ಕೂಲಿ ಅಂದಿನ ನಿನ್ನ ಕಾಯಕದಲ್ಲಿ ಸಂದಿರಬೇಕು.**
**ನೇಮದ ಕೂಲಿಯ ಬಿಟ್ಟು ಹೇಮದಾಸೆಗೆ ಕಾಮಿಸಿ**
**ದ್ರವ್ಯದ ಹಿಡಿದರೆ ತಾ ಮಾಡುವ ಸೇವೆ ನಷ್ಟವಯ್ಯ"**

ಜೀವನದಲ್ಲಿ ಎಲ್ಲರೂ ಕಾಯಕ ಮಾಡಬೇಕು. ನಾವು ಮಾಡುವ ಕಾಯಕಕಷ್ಟೇ ಮಾತ್ರ ಫಲವನ್ನು ನಿರೀಕ್ಷಿಸಬೇಕೆನ್ನುವುದು ಈ ವಚನದ ಧ್ವನಿಯಾಗಿದೆ. ಮಾರಯ್ಯ ತನಗೆ ಅಗತ್ಯವಾದುದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಅಕ್ಕಿಯನ್ನು ಆಯ್ದು ಕಟ್ಟಿಕೊಂಡು ಬಂದಾಗ ಆ ವೇಳೆಯಲ್ಲಿ ಅವನ ಹೆಂಡತಿ ಲಕ್ಕಮ್ಮ ಅದನ್ನು ನೋಡಿ ಇಷ್ಟೊಂದು ಅಕ್ಕಿಯನ್ನು ಸಂಗ್ರಹಿಸುವದು ಉಚಿತವಲ್ಲವೆಂದು ಈ ಮುಂದಿನ ವಚನದಲ್ಲಿ ತಿಳಿಸುತ್ತಾಳೆ.

**ಆಸೆಯೆಂಬುದು ಅರಸಿಂಗಲ್ಲದೆ ಶಿವಭಕ್ತರಿಗೆ ಉಂಟೆ ಆಯ್ಕೆ?**
**ರೋಷವೆಂಬುದು ಯಮದೂತರಿಗಲ್ಲದೆ ಅಜಾತರಿಗುಂಟೆ ಆಯ್ತು?**
**ಈಸಕ್ಕಿಯ ಆಸೆ ನಿಮಗೇಕೆ? ಈಶ್ವರನೊಪ್ಪ**
**ಮಾರಯ್ಯಪ್ರಿಯ ಅಮರೇಶ್ವರ ಲಿಂಗಕ್ಕೆ ದೂರ"**

ಈ ಮೇಲಿನ ವಚನದಿಂದ ಅಂದಂದಿನ ಕಾಯಕವನ್ನು ಅಂದೇ ಮಾಡಿ: ಅಂದಿನ ಊಟವನ್ನು ಮಾಡಬೇಕೆಂಬುದೇ ಇದರ ಅರ್ಥವಾಗಿದೆ. ಸತ್ಯ- ಶುದ್ಧ ಕಾಯಕದಿಂದ ಬಂದ ಸಂಪತ್ತನ್ನಷ್ಟೇ ಉಪಯೋಗಿಸಬೇಕೆನ್ನುವುದು ಅವರಿರ್ವರ ನಿಲುವು ಆಗಿದೆ. ತನಗೆ ಸಾಕಾದುದನ್ನು ಸಮಾಜದ ಸದ್ವಿನಿಯೋಗಕ್ಕಾಗಿ ಬಳಸಿಕೊಂಡರೆ ಸಂಪತ್ತಿನ ಸಮರ್ಪಕ ಬಳಕೆಯಾಗುವುದರ ಜೊತೆಗೆ ಏಕರೂಪತೆಯೂ ಸಹ ಅಲ್ಲಿ ಕಾಣುತ್ತೇವೆ. ಇದರಿಂದ ಸಮಾಜಕ್ಕೆ ಯಾವುದೇ ತೊಂದರೆಗಳಾಗದೇ ಶೋಷಣಾ ಮುಕ್ತ, ಸಧೃಡ

ಸಮಾಜ ನಿರ್ಮಾಣವಾಗಿ ಸ್ವಾತಂತ್ರ್ಯ, ಸಮಾನತೆ, ನ್ಯಾಯವಾಗಿ ಪ್ರತಿಯೊಂದು ಚಟುವಟಿಕೆಗಳು ಜರಗುವಲ್ಲಿ ಎರಡು ಮಾತಿಲ್ಲ. ಶರಣರ ಆರ್ಥಿಕ ವಿಚಾರಗಳು ಇಂದು ಅತಿ ಪ್ರಸ್ತುತವಾಗಿದೆ.

**ಅತಿಥಿ ಸತ್ಕಾರ :**

**"ಏನು ಬಂದಿರಿ ಹದುಳವಿದ್ದೀರಿ ಎಂದೊಡೆ ನಿಮ್ಮ ಮೈಸಿರಿ ಹಾರಿಹೋಹುದೇ?**
**ಒಡನೆ ನುಡಿದರೆ ಸಿರಿ ಹೊಟ್ಟೆಯೊಡೆಯುವುದೇ?**
**ಕೊಡಲಿಲ್ಲದಿದ್ದರೊಂದು ಗುಣವಿಲ್ಲದಿದ್ದಡೆ**
**ಕೆಡಹಿ ಮೊಗ ಕೊಯ್ಯದೆ ಮಾಣ್ಣನೆ ಕೂಡಲಸಂಗಮದೇವ"**

ಎಂದು ತಿಳಿಸಿದ ಬಸವಣ್ಣನವರು ಮನೆಗೆ ಬಂದ ಅಂತಿಥಿಗಳನ್ನು, ಬೀಗರು– ಬಿಜ್ಜರನ್ನು ನಿರ್ಲಕ್ಷಿಸುವವರನ್ನು ತಮ್ಮ ಚಾಟಿ ಏಟಿನಿಂದ ಎಚ್ಚರಿಸುತ್ತಾರೆ. ಇಂದು ಮಾನವ ಸಂಬಂಧಗಳು ಕೃತಕವಾಗಿ ಬಿಟ್ಟಿವೆ. ಪ್ರೀತಿ, ಪ್ರೇಮ, ಒಲುಮೆ, ಸತ್ಕಾರ ಎಲ್ಲವೂ ಅವನಿಂದ ಬಹುದೂರ ಹೋಗುತ್ತಿವೆ. ಎಷ್ಟು ಬೇಕು ಅಷ್ಟಕ್ಕಷ್ಟೇ ಮಾನವನ ಸಂಬಂಧಗಳು ಜರೂರಾಗಿವೆ. ತಮ್ಮ ಹತ್ತಿರ ಯಾರಾದರೂ ಬಂದರೆ ಅವರಿಗೆ ಅತಿಥ್ಯ ಸತ್ಕಾರವನ್ನೇ ಮಾಡಬೇಕೆಂದೇನಿಲ್ಲ. ಅವರ ಜೊತೆಗೆ ಮುಕ್ತವಾಗಿ ಕುಶಲೋಪರಿಯನ್ನು ವಿಚಾರಿಸಿ ಸೌಜನ್ಯವಾಗಿ ನಡೆದುಕೊಂಡರೆ ಅಷ್ಟೇ ಸಾಕೆಂದು ಶರಣರು ತಿಳಿಸುತ್ತಾರೆ. ಆದರೆ ಇಂದು ನಮ್ಮ ಜೊತೆಯಲ್ಲಿಯೇ ವಾಸಿಸುವರ ಬಗ್ಗೆಯೇ ನಮಗೆ ತಿಳಿದಿರುವುದಿಲ್ಲ. ಇನ್ನು ಬಂದವರನ್ನು ಸತ್ಕರಿಸುವುದಂತೂ ದೂರವೇ ಉಳಿಯಿತು. ಮಾನವೀಯ ಸಂಬಂಧಕ್ಕಾಗಿ ಶರಣರ ಉಪದೇಶಗಳು ಇಂದು ಪ್ರಸ್ತುತವೆನಿಸುತ್ತವೆ.

**ನಡೆನುಡಿಯಲ್ಲಿ ಸಾಮರಸ್ಯ :**

"ನುಡಿಯಲ್ಲಿ ಕರ್ಕಶವಿಲ್ಲದೆ, ನಡೆಯಲ್ಲಿ ಬೇಸರವೋಗದೆ ಹಿಡಿದ ಭಕ್ತಿಯ ಕಡೆತನಕ ಬಿಡದೆ: ಬಡತನ ಎಡರು ಸಂಕಟಗಳು ಬಂದಲ್ಲಿ ಚಿಂತೆಯಿಂದ ಕಾಂತಿಗುಂದದೆ, ಅಡಿಗಡಿಗೆ ಶಿವ ಶಿವ ಎಂಬ ನುಡಿಯ ಮರೆಯದಿರ್ಪ ಸದ್ಭಕ್ತರಿಗೆ ಬೇಡಿದ ಪದವಿಯವನೀವ ನಮ್ಮ ಅಖಂಡೇಶ್ವರಾ" ಎನ್ನುವ ಷಣ್ಮುಖ ಶಿವಯೋಗಿಳ ಮಾತುಗಳು ನಮ್ಮ ನಡೆ– ನುಡಿಯ ಬಗ್ಗೆ ತಿಳಿಸಿರುವುದು ಕಂಡು ಬರುತ್ತವೆ. ರಾಜಕೀಯ ಮುಖಂಡರು ಚುನಾವಣೆಯ ಸಂದರ್ಭದಲ್ಲಿ ಜನತೆಗೆ ಸವಲತ್ತು ಸಹಕಾರದ ಆಶ್ವಾಸನೆಗಳ ಮಹಾಪೂರವನ್ನೇ ಹರಿಸುತ್ತಾರೆ. ಕೆಲಸವಾದ ನಂತರ ಹೇಳಿದ ಮಾತಿಗೆ ಬೆಲೆ ಕೊಟ್ಟು ಒಂದು ಸಲವೂ ಹೊರಳಿ ನೋಡುವದಿಲ್ಲ. ಆದರೆ ಶರಣರು ಮಾತ್ರ ನಡೆ– ನುಡಿಯಲ್ಲಿ ಒಂದಾದರು; ಹಾಗೆ ನಡೆದು ತೋರಿಸಿದರು. ಅದಕ್ಕಾಗಿಯೇ ಅವರ ನಡೆ– ನುಡಿಗಳು ಇಂದು ಬಹಳ ಪ್ರಸ್ತುತವಾಗಿವೆ.

**ಸತ್ಯ**

ಇಂದು ಸತ್ಯವು ಎಲ್ಲಿ ಹುಡುಕಿದರೂ ನಮಗೆ ಸಿಗುವುದಿಲ್ಲ. ಅದು ಅಷ್ಟು ಕ್ವಚಿತ್ತಾಗಿ ಬಿಟ್ಟಿದೆ. ದಿನನಿತ್ಯ ನ್ಯಾಯಾಲಯಗಳಲ್ಲಿ ಎಷ್ಟೊಂದು ಸುಳ್ಳುಗಳೇ ಸತ್ಯವಾಗುತ್ತವೆ; ಸತ್ಯಗಳೇ ಕೆಲವೊಂದು ಬಾರಿ ಸುಳ್ಳಾಗುತ್ತವೆ. ಭಗವದ್ಗೀತೆಯ ಮೇಲೆ ಪ್ರಮಾಣ ಮಾಡಿಯೇ ಈ ರೀತಿ ನಡೆದುಕೊಳ್ಳಲಾಗುತ್ತದೆ. ಮನುಷ್ಯ ತನ್ನ ಸ್ವಾರ್ಥ ಜೀವನಕ್ಕೋಸ್ಕರ ಸತ್ವವನ್ನು ಸುಳ್ಳನ್ನಾಗಿ: ಸುಳ್ಳನ್ನು ಸತ್ರವನ್ನಾಗಿ ಮಾಡಿಕೊಂಡು ನಡೆಯುತ್ತಾನೆ. ಆ ಕಾರಣ ಸುಳ್ಳು ನುಡಿಯುವುದನ್ನೇ ತೀವ್ರವಾಗಿ ವಿರೋಧಿಸಿದ ಬಸವಣ್ಣನವರ ವಚನ ಹೀಗಿದೆ.

**"ದೇವಲೋಕ ಮತ್ರಲೋಕವೆಂಬುದು ಬೇರಿಲ್ಲ ಕಾಣಿರಣ್ಣ**
**ಸತ್ಯವ ನುಡಿವುದೇ ದೇವಲೋಕ**
**ಮಿಥ್ಯವ ನುಡಿವುದೇ ಮರ್ತ್ಯಲೋಕ**
**ಆಚಾರವೇ ಸ್ವರ್ಗ ಅನಾಚಾರವೇ ನರಕ!**
**ನೀವೇ ಪ್ರಮಾಣಂ ಕೂಡಲಸಂಗಮದೇವ"**

**ಅಪಾರವಾದ ಮಾನವಪ್ರೇಮ :**

"ಇವನಾರವ, ಇವನಾರವ, ಇವನಾರವ ಎಂದೆನಿಸದಿರಯ್ಯಾ ಇವ ನಮ್ಮವ, ಇವ ನಮ್ಮವ ಇವ ನಮ್ಮವನೆಂದೆನಿಸಯ್ಯ ಕೂಡಲ ಸಂಗಮದೇವಾ ನಿಮ್ಮ ಮನೆಯ ಮಗನೆಂದೆನಿಸಯ್ಯ ಎಂದು ಬಸವಣ್ಣನವರ ಬಹಳ ಮೌಲಿಕವಾದ ವಚನದ ಈ ಮಾತುಗಳನ್ನು ಗಮನಿಸಬೇಕಾಗುತ್ತದೆ. ಯಾರೇ ಇರಲಿ ಇವನಾರು? ಅವನಾರು? ಎಂದು ಪ್ರಶ್ನಿಸಬಾರದು ಎಂದು ತಿಳಿಸುತ್ತಾನೆ. ಅವನನ್ನು ತಮ್ಮೊಳಗೆ ಬರಮಾಡಿಕೊಂಡು ಸಕಲರೂ ಒಂದಾಗಿ ಬಾಳುವ ಶರಣರ ರೀತಿ ವಿಶ್ವಬಾಂಧವ್ಯದ ಮೂಲ ಮಂತ್ರವಾಗಿದೆ.

ಹೀಗೆ ಉಪದೇಶಿಸಿದ ಶರಣರು ಅಂದಿನ ಉಚ್ಚವರ್ಣಿಯರಿಂದ ನಿರ್ಲಕ್ಷಕ್ಕೊಳಗಾದ. ಕೆಳಜಾತಿಯವರನ್ನು ತಮ್ಮ ಬಂಧು ಬಾಂಧವರೆಂದು ಎಲ್ಲರನ್ನೂ ಅಪ್ಪಿಕೊಂಡು ಬದುಕಿ ಬಾಳದ್ದು ಒಂದು ಅಪೂರ್ವ ಸಾಧನೆಯೆಂದೇ ನಾವು ಇಲ್ಲಿ ಅರಿಯಬೇಕಾಗುತ್ತದೆ.

"ಅಪ್ಪನು ನಮ್ಮ ಮಾದಾರ ಚೆನ್ನಯ್ಯ ಬೊಪ್ಪನು ನಮ್ಮ ಡೋಹರ ಕಕ್ಕಯ್ಯ ಚಿಕ್ಕಯ್ಯನೆನಮ್ಮಯ್ಯ ಕಾಣಯ್ಯ ಅಣ್ಣನು ನಮ್ಮ ಕಿನ್ನರ ಬೊಮ್ಮಯ್ಯ: ಎನ್ನನೇತಕ್ಕರಿಯರೀ, ಕೂಡಲಸಂಗಯ್ಯ?" ಹೀಗೆ ಬಸವಣ್ಣನು ಕರೆಯಿಸಿಕೊಂಡು, ತಾನು ಕೂಡಾ ಅವರೊಡನೆ ಬೆರೆತುಕೊಂಡದ್ದು ಗಮನಾರ್ಹವಾಗಿದೆ. ಅಲ್ಲದೆ ಸಹಬಾಳ್ವೆ ಸಹೋದರತೆಯನ್ನು ಗಾಳಿಗೆ ತೂರಿ ಒಮ್ಮತವಿಲ್ಲದೇ ಯಾವಾಗಲೂ ಹೊಡೆದಾಡುವ ಅಂದಿನ ಸಂದರ್ಭವನ್ನು ಈ ರೀತಿ ಬಸವಣ್ಣನವರು ವಿಡಂಬಿಸಿದ್ದಾರೆ.

"ಕಾಗೆಯೊಂದಗುಳ ಕಂಡರೆ ಕರೆಯದೆ ತನ್ನ ಬಳಗವನು? ಕೋಳಿಯೊಂದು ಕುಟುಕ ಕಂಡರೆ ಕೂಗಿ ಕರೆಯದೆ ತನ್ನ ಕುಲವೆಲ್ಲವ? ಶಿವಭಕ್ತನಾಗಿ ಭಕ್ತಿಪಕ್ಷ ವಿಲ್ಲದಿದ್ದರೆ ಕಾಗೆ ಕೋಳಿಯಿಂದ ಕರಕಷ್ಟ ! ಕೂಡಲಸಂಗಮದೇವಾ? ಎನ್ನುವ ವಚನದಲ್ಲಿ ಅದರ ಕೊರಗು ವಿನಿತ್ತೆಂಬುದು ತಿಳಿಯುತ್ತದೆ. ಈ ರೀತಿ ಸಹೋದರತಾ ಭಾವದ ಪಾಠಗಳು, ಅಂಥ ಸಂದೇಶಗಳು ಬಹಳ ಅವಶ್ಯಕವಾಗಿವೆ.

ನಾವು ಇಂದು ನಮ್ಮ ಜೀವನದ ಪರಮೋಚ್ಚ ಗುರಿಯನ್ನು ಮರತೇ ಬಿಟ್ಟಿದ್ದೇವೆ. ನಾವೆಲ್ಲರೂ ರಾಕ್ಷಸಿ ಪ್ರವೃತ್ತಿಯವರಾಗಿದ್ದೇವೆ. ಈ ಯಾಂತ್ರಿಕ ಜೀವನದಲ್ಲಿ ಮನುಷ್ಯನು ವಿಕೃತನಾಗಿಬಿಟ್ಟಿದ್ದಾನೆ. ಮುಂದಿನ ದಿನಮಾನಗಳಲ್ಲಿ ಜರುಗಬಹುದಾದಂಥ ಘಟನೆಗಳಿಂದ ನಾಗರಿಕ ಸಂಸ್ಕೃತಿ ಹಾಳಾಗಿ ಮನುಷ್ಯ ಮತ್ತೇ ತನ್ನ ಮೊದಲಿನ ಸ್ಥಿತಿಗೆ ಮರಳುವುದು ಅನುಮಾನ. ನಾವು ಶರಣರಂತಾಗಲು ಅವರು ಹಾಕಿಕೊಟ್ಟ ಮಾರ್ಗದಲ್ಲಿ ಸಾಗಬೇಕು. ಶರಣರ ವಿಚಾರಗಳು ಅವರು ಅಂದು ಮಾಡಿದ ಕಾರ್ಯಗಳು, ಅಂದಿಗೂ ಇಂದಿಗೂ ಮುಂದೆಯೂ ಪ್ರಸ್ತುತ.

**ಪರಾಮರ್ಶನ ಗ್ರಂಥಗಳು :**

1) ಎಮ್.ಎಮ್. ಕಲಬುರಗಿ ಪ್ರ. ಸಂ (2016) ಬಸವ ಯುಗದ ವಚನ ಮಹಾಸಂಪುಟ ಒಂದು, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು
2) ಎಚ್ ತಿಪ್ಪೇರುದ್ರಸ್ವಾಮಿ, (1991) ಶರಣರ ಅನುಭವ ಸಾಹಿತ್ಯ ಡಿವಿಕೆ ಮೂರ್ತಿ ಪ್ರಕಾಶನ ಮೈಸೂರು
3) ಡಾ. ಎಲ್ ಬಸವರಾಜು (2008) ಬಸವಣ್ಣನವರ ವಚನಗಳು ಪ್ರಕಾಶಕರು ಗೀತಾ ಬುಕ್ ಹೌಸ್ ಮೈಸೂರು
4) ಎಂ.ಆರ್. ಶ್ರೀನಿವಾಸಮೂರ್ತಿ (2013) ವಚನ ಧರ್ಮಸಾರ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು
5) ಜಿ.ಎನ್.ಉಪಾದ್ಯ (2013) ಅನುಭಾವ ಸಾಹಿತ್ಯದ ಅನನ್ಯತೆ ಕನ್ನಡ ಸಾಹಿತ್ಯ ಪರಿಷತ್ತು ಮುಂಬೈ ಘಟಕ.